(ದಿನಾಂಕ 03-04-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.)

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಡಿ.ಎಲ್.ಆರ್. ವಕೀಲರಿಂದಃ-**

ಸ್ಕಂದಮೂರ್ತಿ ಮಲ್ಲಪ್ಪಯ್ಯನ ಮಗನಾಗಿರುತ್ತಾನೆ. ಸ್ಕಂದಮೂರ್ತಿ 2 ಎಕರೆ 5 ಸೆಂಟ್ಸ್ ಗೆ ಸಂಬಂದಪಟ್ಟಂತೆ ಗೌರಮ್ಮನಿಗೆ ಹಕ್ಕು ಬಿಡುಗಡೆ ಪತ್ರದ ನೀಡಿರುವ ವಿಷಯ ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ನನ್ನ ವಾದ ಪತ್ರದಲ್ಲಿ ಬರೆಸಿರುವ ವಿಷಯ ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂದಪಟಟಂತೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಮೋಟೇಷನ್ ನಂಬರ್48/97-98 ಎಂದು ಗೌರಮ್ಮ ತನ್ನ ಹೆಸರಿಗೆ ಮೊಟೇಷನ್ಮಾಡಿಸಿಕೊಂಡಿರುವುದು ನನಗೆ ಗೊತ್ತಿಲ್ಲ. 2 ಎಕರೆ 5 ಸೆಂಟ್ಸ್ ಗೌರಮ್ಮನಿಗೆ 2 ಎಕರೆ 4 ಸೆಂಟ್ಸ್ ನನ್ನದು ಆಗಿರುತ್ತದೆ.ದಾವಾ ಆಸ್ತಿ 2 ಎಕರೆ 4 ಸೆಂಟ್ಸ್ ನನ್ನದು ಅಲ ್ಲ ಎಂದರೆ ಸರಿಯಲ್ಲ. ಗೌರಮ್ಮನನ್ನು ನಾನು ನೋಡಿರುವುದಿಲ್ಲ. ಅವರು ಈಗ ಮರಣ ಹೊಂದಿದ್ದಾರೆ ಎಂದರೆ ಸರಿ. ನಾನು ದಾವಾ ಆಸ್ತಿಗೆ ಸಂಬಂದಪಟ್ಟಂತೆ ಕಂದಾಯ ಇಲಾಖೆಯೊಂದಿಗೆ ಸೇರಿ ಸೃಷ್ಟಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಎ.ಸಿ. ನ್ಯಾಯಾಲಯದಲ್ಲಿ ಅಪೀಲು ಹಾಕಿದ್ದಾರೆ ಎಂದರೆ ಸರಿ. ಅದರ ನಂಬರ್ 185/2012-13 ಎಂದರೆ ನನಗೆ ಗೊತ್ತಿಲ್ಲ. ಎ.ಸಿ. ನ್ಯಾಯಾಲಯದಲ್ಲಿ ನಾನು ಹಾಜರು ಆಗಿರುತ್ತೇನೆ. ಅದರಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಹೋಗಲು ನಿರ್ದರಿಸಿದ್ದರು ಎಂದರೆ ಸರಿ. ನಾನು ಪ್ರತಿವಾದಿ 2 ರ ಮೇಲೆ ಸುಳ್ಳು ದಾವೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದರೆ ಸರಿ. ದಿನಾಂಕಃ 14.03.2015 ರಂದು ನಾನು ಪ್ರತಿವಾದಿಗಳು ಅದರಲ್ಲಿ ಉಳುಮೆ ಮಾಡುತ್ತಿದ್ದಾಗ ಅಡ್ಡಿ ಪಡಿಸಿದ್ದೆ ಎಂದರೆ ಸರಿಯಲ್ಲ. ಅದಕ್ಕೊಸ್ಗರ ಅಸಲು ದಾವೆ ಸಂಖ್ಯೆ 90/2015 ನ್ನು ಹಾಕಿದ್ದರು ಎಂದರೆ ಸರಿಯಲ್ಲ. 90/2015 ರಲ್ಲಿ ನಾನು ತಕರಾರನ್ನು ಹಾಕಿರುತ್ತೇನೆ. ನನ್ನ ಮಾವನವರಿಗೆ ಸದರಿ ಆಸ್ತಿ ಅವರ ತಂದೆ ಎಂದರೆ ಪತ್ರಿ ಬಸಯ್ಯ ರಿಂದ ಬಂದಿರುತ್ತದೆ. ಸದರಿ ಆಸ್ತಿ ಮೂಲತಃ ಕೆ.ಕೆ.ಬಿ.ಎಂ. ಮಲ್ಲಪ್ಪನವರಿಗೆ ಸೇರಿದ್ದು ಎಂದರೆ ಸರಿಯಲ್ಲ. 68 ರಿಂದ ಅವರ ಹೆಸರಿನಲ್ಲಿ ಪಹಣಿ ಬಂದಿದೆ ಎಂದರೆ ಸರಿಯಲ್ಲ. ನನ್ನ ಮಾವನವರು 1981-82 ನೇ ಇಸವಿಯಲ್ಲಿ ಕಂದಾಯ ಇಲಾಖೆಯೊಂದಿಗೆ ಸೇರಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದರು ಎಂದರೆ ಸರಿಯಲ್ಲ. ನಾವು ಸುಳ್ಳು ಪಾಲು ಪಟ್ಟಿ ಸೃಷ್ಟಿ ಮಾಡಿಕೊಂಡು ದಾವಾ ಆಸ್ತಿಯನ್ನು

ಕಬಳಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಪಾಲು ಪಟ್ಟಿಯಲ್ಲಿ ಎಸ್ಎಸ್ಎಂ. ಗೌರಮ್ಮನ ಸಹಿಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಪಾಲು ಪಟ್ಟಿಯನುನ ನನ್ನ ಮನೆಯವರು ನನ್ನ ಮಾವನವರು ಮಾಡಿಸಿರುತ್ತಾರೆ. ಪಾಲು ಪಟ್ಟಿ ನೊಂದಣಿ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.ಈ ದಾವೆಯಲ್ಲಿ ಏನೇನು ದಾಖಲೆಗಳನ್ನು ಹಾಕಿದ್ದೇನ ಎಂದು ಹೇಳಲು ಆಗುವುದಿಲ್ಲ. ಎ.ಎಂ.ರಾಜಶೇಖರಯ್ಯ ನನ್ನ ಮಗನಾಗಬೇಕು. ದಿನಾಂಕಃ 23.07.2018 ರಂದು ನಾನು ನನ್ನ ಮಗನಿಗೆ ಕ್ರಯ ಪತ್ರ ಮಾಡಿದ್ದೇನೆ ಎಂದರೆ ಸರಿ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲೂ ಸಹ ಎಸ್ಎಸ್ಎಂ ಗೌರಮ್ಮನ ಸಹಿಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಗೌರಮ್ಮನ ಸಹಿಯನ್ನು ಲೇವೆನ್ ಇ ಮತ್ತು ಹೇಳಿಕೆಯಲ್ಲಿ ನಕಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 90/2015 ರ ನಂತರ ಈ ಸುಳ್ಳು ದಾವೆಯನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಭೂಮಿ ಎಂದು ಗೊತ್ತಿದ್ದರೂ ಸಹ ಈ ಸುಳ್ಳು ದಾವೆಯನ್ನು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಡಲಬಾಳು ವಾಸಿ ಯಾಗಿರುತ್ತೇನೆ. ನಾನು ವಾಸವಾಗಿಲ್ಲ ಎಂದರೆ ಸರಿಯಲ್ಲ. ನಾನು ರಾಯಚೂರಿನಲ್ಲಿ 12 ವರ್ಷಗಳಿಂದ ಇದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂದಪಟ್ಟಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳು ಅಡ್ಡಿ ಪಡಿಸಿದ್ದರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳೇ ಸಾಗು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿ.ಪಿ. 2 ರಿಂದ ನಿ.ಪಿ. 7 ದಾಖಲೆಗಳು ಸೃಷ್ಟಿ ಮಾಡಿ ಹಾಕಿರುವ ದಾಖಲೆಗಳು ಎಂದರೆ ಸರಿಯಲ್ಲ. ನನಗೆ ಓದಲೂ ಬರೆಯಲು ಬರುವುದಿಲ್ಲ. ದಾವಾ ಆಸ್ತಿಯು ನಮ್ಮ ಕುಟುಬಂಕ್ಕೆ ಸಂಬಂಧಿಸದೇ ಇದ್ದರೂ ಸಹ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :-ಇಲ್ಲ**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,
ಹಗರಿಬೊಮ್ಮನಹಳ್ಳಿ.